


ಹಚ್ಚಿಕೊಂಡಿದ್ದ ವಿಭೂತಿಯ ಅಡ್ಡಗೆರೆಗಳು ಎದ್ದು ಕಾಣುತ್ತಿದ್ದವು! ತಾತನಿಗೆ ಅದನ್ನು ನೋಡಿದರೆ ಮನಸ್ಸಿಗೆ ಆನಂದವಾಗುತ್ತಿತ್ತು.

'ತಾತ, ಬೇಶದಿವಿ ಅಂತ ಖುಷಿಯಿಂದ ಹೇಳಿಕೊಂಡೆ ಬಂದಿದ್ದೀನಿ. ವಾರಹತ್ತು ದಿನದಿಂದ ನನ್ನ ಕೈಯಾಗಿನ ಕಲ್ಲು ನನ್ನ ಕಾಲಮ್ಯಾಲೆ ಬಿದ್ದಂಗಾಗಿ ಬ್ಯಾನೆ ತಡಕೊಳ್ಳದಾಗವಲ್ದು. ಈಗ ನೀನೇ ದಾರಿ ತೋರಿಸ್ಬೇಕು...'

'ಮಲ್ಲಪ್ಪ, ಈಗ ಅಂಥದ್ದೇನಾಗ್ಯಾದ? ಬದುಕಿನ ದಾರ್‍ಯಾಗ ಏರು-ಇಳವು ಇರ್‍ತವ. ಪರೀಕ್ಷ ಕಾಲ ಎದುರಾಗ್ತವ. ತಟಗು ತಾಳ್ಮೆಯಿಂದ ಯೋಚ್ನೆ ಮಾಡಿದ್ರ ದಾರಿ ಸಿಗತದಂತ ಅನುಭವಸ್ಥನಾದ ನಿನ್ಗ ಯಾರು ಹೇಳ್ಬೇಕು?' ತಾತ ಚೂರೂ ಆತಂಕಗೊಳ್ಳದೇ ಹೇಳಿದ.

'ನೀನು ಬೆಟ್ಟಯಿದ್ದಂಗಿದ್ದಿ. ಚಳಿ ಮಳೆ ಬಿಸಿಲಿಗೆ ಅಂಜದಿಲ್ಲ ಬುಡು. ನಿನ್ನ ಹೊರತು ನಾನೇನು ಯೋಚ್ನೆ ಮಾಡಗಿಂದ್ದೀನೇನು? ನನ್ನ ಮುದ್ದಿನ ಸಣ್ಣ ಮಗ ಆದೀಶನ್ನ ಮನೆಮಂದಿಯೆಲ್ಲ ಮುದ್ದು ಮಾಡಿ ಬೆಳೆಸಿದ್ದೀವಿ. ಬಾಳ ಸಮಾಧಾನದ ಹುಡುಗ ಅವನು! ಅಂಥವನಿಗೆ ದೇವ್ರು ಅದೆಲ್ಲಿಂದ ಬುದ್ಧಿಕೊಟ್ಟನೋ. ತಾತ, ಅದೇ ಕಲ್ಯಾಣಪುರದ ನಮ್ಮ ಯಜಮಾನ್ರು ಶಿವಸಂಗಪ್ಪನ ಕೊನೆಯ ಸೊಸೆಯನ್ನು ನೋಡಿ ಮರುಳಾಗ್ಯಾನ. ಮನಸೋತು ಕುಂತಾನ (ಈ ಮಾತು ಹೇಳುವಾಗ ದನಿ ಹೊರಡಿಸದೇ ಹೇಳಿದ) ಈಗ ಆಕಿನನ್ನೇ ಮದುವಿ ಆಗ್ತೀನಿ ಅಂತ ಹಟ ಹಿಡದು ಕುಂತಾನ. ಶಿವಸಂಗಪ್ಪ ಯಜಮಾನ್ರು ಕಿವಿಗೆ ಬಿದ್ರ ಏನಾದೀತು ನಮ್ಮ ಕಥೆ?'

'ಇದು ಸೂಕ್ಷ್ಮ ವಿಚಾರ ಐತೆ. ಆದ್ರೆ ಆದೀಶನ ನಿರ್ಧಾರ ತಪ್ಪಿಲ್ಲ. ಅದು ನೆರವೇರದು, ಬಿಡದು...'

'ತಾತ, ಮಗನ ಹಟ ಸರಿಯಂತಿದ್ದಿ...? ಶಿವಸಂಗಪ್ಪನ ಸೊಸೆಯಾಕೆ. ಸಣ್ಣ ಮನೆ ಸೊಸೆಯಲ್ಲ'

'ಈಗ ಶಿವಸಂಗಪ್ಪನಿಗೆ ಬರೀ ಸೊಸೆಯಾಗಿ ಉಳಿದಿಲ್ಲ. ಆಕೆ ಮಗಳೂ ಆಗಿದ್ದಾಳ...'